

ನರಸಿಂಹಮೂರ್ತಿ. ‘ಗುಜರಾತ್‌ನಲ್ಲಿ ಈ ಪ್ರಯೋಗ ಯಾವ ಹಂತದಲ್ಲಿದೆ ಎಂದರೆ, ಕೈದಿಯನ್ನು ಜೈಲಿನಿಂದ ನ್ಯಾಯಾಲಯಕ್ಕೆ ಕರೆತರುವುದು ಸಾಧ್ಯವಿಲ್ಲದಾಗ ಜೈಲಿನಿಂದಲೇ ಆತನ ಹೇಳಿಕೆ ದಾಖಲಿಸಿಕೊಳ್ಳಲಾಗುತ್ತದೆ. ಅದು ಅಕ್ಷರ ರೂಪಕ್ಕೆ ಪರಿವರ್ತನೆಯಾಗುತ್ತದೆ. ಹೀಗೆ ಬಳಸಿಕೊಳ್ಳುವ ವಾತಾವರಣ ನಿರ್ಮಾಣ ಆದರೆ ಎಂಥ ತಂತ್ರಜ್ಞಾನವನ್ನಾದರೂ ಸಿದ್ಧಪಡಿಸಿಕೊಡಲು ತಂತ್ರಜ್ಞರು ತಯಾರಿದ್ದಾರೆ’ ಎಂಬುದು ನರಸಿಂಹಮೂರ್ತಿ ಅಂಬೋಣ.

ಗಣಕ ಪರಿಷತ್‌ನ ಇನ್ನೊಂದು ಹೊಸ ಆವಿಷ್ಕಾರ ‘ಅಕ್ಷರ ಜಾಣ’. ಕಾಗದವನ್ನು ಸ್ಕ್ಯಾನ್ ಮಾಡಿ ಈ ತಂತ್ರಜ್ಞಾನಕ್ಕೆ ಅಳವಡಿಸಿದರೆ ಆ ಅಕ್ಷರಗಳು ಮತ್ತೆ ತಿದ್ದಲು ಸಾಧ್ಯವಿರುವ ಅಕ್ಷರಗಳಾಗಿ ಪರಿವರ್ತನೆಯಾಗುತ್ತವೆ. ರೇವಾ ವಿಶ್ವವಿದ್ಯಾಲಯದೊಂದಿಗೆ ಒಪ್ಪಂದ ಮಾಡಿಕೊಂಡು, ಸ್ಪೆಲ್ ಚೆಕ್ ಮತ್ತು ಗ್ರಾಮರ್ ಚೆಕ್ ತಂತ್ರಜ್ಞಾನವನ್ನೂ ಅಭಿವೃದ್ಧಿಪಡಿಸಲು ಗಣಕ ಪರಿಷತ್ ಮುಂದಾಗಿದೆ. ಭಾಷಾಂತರ ಮಾಡುವ ತಂತ್ರಜ್ಞಾನದ ಮೇಲೆಯೂ ಮುಂದಿನ ದಿನಗಳಲ್ಲಿ ಕೆಲಸ ಮಾಡಲಿದೆ.

### ಮೈ ಲ್ಯಾಂಗ್ ಬುಕ್ಸ್ ಡಿಜಿಟಲ್: ಕನ್ನಡಕ್ಕೊಂದು ಹೊಸ ಪ್ರಯೋಗ

ಇದೊಂದು ಡಿಜಿಟಲ್ ಪ್ರಕಾಶನ ಸಂಸ್ಥೆ. ಇದರಲ್ಲಿ ಪುಸ್ತಕಗಳನ್ನು ಡಿಜಿಟಲ್ ಮಾದರಿಯಲ್ಲಿ, ಆಡಿಯೊ ರೂಪದಲ್ಲಿ ಪ್ರಕಟಿಸಲಾಗುತ್ತದೆ. ಕಾದಂಬರಿಯಲ್ಲಿ ಬರುವ ಸಂಭಾಷಣೆಗೆ ಅಗತ್ಯವಿರುವ ಭಾವವನ್ನು ಕೇಳುಗನಿಗೆ ದಾಟಿಸುವ ಕೆಲಸವನ್ನು ಆಡಿಯೊ ಮಾಡಲಿದೆ. ಜೊತೆಗೆ ಮುದ್ರಣ ಮಾದರಿಯಲ್ಲಿಯೂ ಸಿಗುತ್ತದೆ. ಇಂಗ್ಲಿಷ್‌ನಲ್ಲಿ ಈ ಪ್ರಯೋಗ ವ್ಯಾಪಕವಾಗಿ ನಡೆದಿದೆ. ಆದರೆ ಕನ್ನಡದ ಮಟ್ಟಿಗೆ ಇದು ಹೊಚ್ಚಹೊಸ ಪ್ರಯೋಗ.

ಹೊಸ ತರಹದ ಓದುಗರು, ಬರಹಗಾರರನ್ನು ಈ ವೇದಿಕೆಯಲ್ಲಿ ಸೇರಿಸುವುದು ಇದರ ಉದ್ದೇಶ. ‘ವಿಜ್ಞಾನ, ತಂತ್ರಜ್ಞಾನ ಬರಹಗಳೂ ಕನ್ನಡದಲ್ಲಿ ಸಿಗುವಂತೆ ಆಗಬೇಕು. ಅದರಿಂದ ಕನ್ನಡಕ್ಕೂ ಒಳಿತಾಗುತ್ತದೆ’ ಎಂದು ಈ ಯೋಜನೆಯ ಮುಖ್ಯಸ್ಥ ಪವಮಾನ ಪ್ರಸಾದ್ ಅವರ ವಿಶ್ವಾಸ.

ಹೊಸ ಬರಹಗಾರರನ್ನು ಹುಡುಕುವುದಕ್ಕೆಂದೇ ಸ್ಪರ್ಧೆಗಳನ್ನು ಏರ್ಪಡಿಸುವುದು, ಅವರಿಗೆ ಪ್ರಾಜೆಕ್ಟ್‌ಗಳನ್ನು ಕೊಡುವುದು ಹೀಗೆ ನಾನಾ ಯೋಜನೆಗಳನ್ನು ಅವರು ಹಾಕಿಕೊಂಡಿದ್ದಾರೆ. ಓದುಗರಿಗೆ ಈಗಾಗಲೇ ಚಿರಪರಿಚಿತ ಇರುವ ಲೇಖಕರನ್ನೂ ಸಂಪರ್ಕಿಸಿ ಅವರಿಂದಲೂ ಬರಹಗಳನ್ನು ಪಡೆದುಕೊಳ್ಳುವ ಉದ್ದೇಶವಿದೆ. ಪುಸ್ತಕಗಳ ಮಾರಾಟಕ್ಕೆ ಅನುಗುಣವಾಗಿ ಲೇಖಕರಿಗೆ ಆಕರ್ಷಕ ಸಂಭಾವನೆಯನ್ನೂ ನೀಡಲಾಗುತ್ತದೆ. ಎಲ್ಲಕ್ಕಿಂತ ವಿಶೇಷವೆಂದರೆ ಈ ಎಲ್ಲ ಕೆಲಸ ಒಂದು ಸಾಂಸ್ಥಿಕ ಸ್ವರೂಪದಲ್ಲೇ





### ಹೊಸ ಮಾದರಿ; ಹೊಸ ದಾರಿ

ಭವಿಷ್ಯ ಇರುವುದೇ ಆನ್‌ಲೈನ್ ವೇದಿಕೆಯಲ್ಲಿ. ‘ಸಾಫ್ಟ್’ ಮಾದರಿಯಲ್ಲಿದ್ದರೆ ಯಾವುದನ್ನಾದರೂ ಜನರಿಗೆ ತಲುಪಿಸಲು ಸುಲಭ. ಇದು ಭಾಷೆಗೂ ಅನ್ವಯವಾಗುತ್ತದೆ. ಕನ್ನಡವು ಹೆಚ್ಚು ಜನರನ್ನು ತಲುಪಬೇಕೆಂದರೆ ಅದು ಆನ್‌ಲೈನ್ ಜಾಯಮಾನಕ್ಕೆ ಒಗ್ಗಿಕೊಳ್ಳುವುದು ತೀರಾ ಅನಿವಾರ್ಯ.

ಜನಪ್ರಿಯವಾಗಿರುವ ಬೆರಳೆಣಿಕೆಯ ಲೇಖಕರ ಪುಸ್ತಕಗಳು ಮಾತ್ರ ಅಂಗಡಿಗಳಲ್ಲಿ ಸ್ವಲ್ಪ ವೇಗವಾಗಿ ಮಾರಾಟವಾಗುತ್ತವೆ. ಅದು ಬಿಟ್ಟರೆ ಸಣ್ಣಪುಟ್ಟ ಲೇಖಕರ ಪುಸ್ತಕಗಳ ಮೊದಲ ಮುದ್ರಣದ ಪ್ರತಿ ಪೂರ್ತಿ ಮಾರಾಟವಾಗಲು ಎಂಟ್ಹತ್ತು ವರ್ಷಗಳೇ ಬೇಕು. ಆದರೆ ಆನ್‌ಲೈನ್ ತಾಣಗಳ ಮೂಲಕ ಮಾರಾಟ ಮಾಡುವ ಅವಕಾಶಗಳು ತೆರೆದುಕೊಂಡ ಮೇಲೆ ಜನಪ್ರಿಯವಲ್ಲದ ಹೊಸ ಲೇಖಕರ ಪುಸ್ತಕಗಳೂ ನಾಲ್ಕೈದು ತಿಂಗಳುಗಳಲ್ಲೇ ಮರುಮುದ್ರಣಕ್ಕೆ ಹೋಗುವಂತಾಗಿದೆ. ಇದರಿಂದ, ಆನ್‌ಲೈನ್ ಮಾರಾಟ ಪ್ರಯೋಗಕ್ಕೂ ಮುಂಚೆ ಓದುಗರಿಗೆ ಪುಸ್ತಕಗಳ ಬಗ್ಗೆ ಮಾಹಿತಿಯ ಕೊರತೆ ಹಾಗೂ ಸುಲಭವಾಗಿ ಲಭ್ಯವಾಗುವ ಸಮಸ್ಯೆ ಇತ್ತು. ಹಾಗಾಗಿ ಪುಸ್ತಕಗಳು ಹೆಚ್ಚು ಮಾರಾಟವಾಗುತ್ತಿರಲಿಲ್ಲ. ಇಂದು ಆನ್‌ಲೈನ್ ಮಾಧ್ಯಮ ಮಾರಾಟದ ಹೊಸ ದಾರಿಗಳನ್ನು ಸೃಷ್ಟಿಸಿರುವುದಷ್ಟೇ ಅಲ್ಲ, ಓದುಗವಲಯವನ್ನೂ ಸೃಷ್ಟಿಸುತ್ತಿದೆ.

ಮೊದಮೊದಲು ಮೊಬೈಲ್, ಟ್ಯಾಬ್‌ಗಳಲ್ಲಿ ಪುಸ್ತಕ ಓದುವುದು ಕಿರಿಕಿರಿ ಎನ್ನಿಸುತ್ತಿತ್ತು. ಆದರೆ ಈಗ ಅದಕ್ಕೆ ಜನರು ಒಗ್ಗಿಕೊಳ್ಳುತ್ತಿದ್ದಾರೆ. ಮುಂದಿನ ಪೀಳಿಗೆಗೆ ಅದೊಂದು ಸಮಸ್ಯೆ ಎನ್ನಿಸುವುದೇ ಇಲ್ಲ.

**-ದೇವು ಪತ್ತಾರ,**
‘ಬುಕ್ ಬ್ರಹ್ಮ’ ವೆಬ್‌ಸೈಟ್‌ನ ಸಂಪಾದಕ